# ಪಟ್ಟಣ ಪಂಚಾಯಿತಿ ಕಾರ್ಯಾಲಯ,ಸೊರಬ

ನಂ.ಸೊಪಪಂ.ಸಭಾ.ಸಿಆರ್.01/2010-11 ದಿನಾಂಕ:07-06-2010

ದಿನಾಂಕ:14-06-2010 ರಂದು ಸೋಮವಾರ ಬೆಳಿಗ್ಗೆ 11.30ಗಂಟೆಗೆ ಪಟ್ಟಣ ಪಂಚಾಯಿತಿ ಕಾರ್ಯಾಲಯದಲ್ಲಿ ಪಟ್ಟಣ ಪಂಚಾಯಿತಿ ಅಧ್ಯಕ್ಷಾಧಿಕಾರಿಗಳಾದ ಶ್ರೀ.ಪ್ರಭಾಕರದೇಶಪಾಂಡೆ ರವರ ಅಧ್ಯಕ್ಷತೆಯಲ್ಲಿ ಕರೆಯಲಾದ ಪಟ್ಟಣ ಪಂಚಾಯಿತಿಯ ಸಾಮಾನ್ಯ ಸಭೆಯನ್ನು ದಿನಾಂಕ:17-06-2010ರಂದು ಗುರುವಾರ ಬೆಳಿಗ್ಗೆ 11.30ಗಂಟೆಗೆ ಮುಂದೂಡಲ್ಪಟ್ಟಿದ್ದು, ಸದರಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ನಡುವಳಿಕೆಗಳು.

ಸಭೆಗೆ ಹಾಜರಿದ್ದ ಸದಸ್ಯರ ಸಂಖ್ಯೆ:11
ಸಭೆಗೆ ಗೈರು ಹಾಜರಾದ ಸದಸ್ಯರ ಸಂಖ್ಯೆ:03
ಒಟ್ಟು ಸದಸ್ಯರುಗಳ ಸಂಖ್ಯೆ:14

ಸಭೆಗೆ ಹಾಜರಿದ್ದ ನಾಮ ನಿರ್ದೇಶನ ಸದಸ್ಯರುಗಳ ಸಂಖ್ಯೆ:02
ಸಭೆಗೆ ಗೈರು ಹಾಜರಾದ ನಾಮ ನಿರ್ದೇಶನ ಸದಸ್ಯರುಗಳ ಸಂಖ್ಯೆ:01
ಒಟ್ಟು ಸದಸ್ಯರುಗಳ ಸಂಖ್ಯೆ:03

ವಿಷಯ ಸಂಖ್ಯೆ:01

ದಿನಾಂಕ:11-02-2010ರಂದು ನಡೆದ ಸಾಮಾನ್ಯ ಸಭೆಯ ನಡುವಳಿಕೆ ಓದಿ ಒಪ್ಪುವ ವಿಚಾರ.

ತೀರ್ಮಾನ:

ಓದಿ ಒಪ್ಪಲಾಯಿತು.

ವಿಷಯ ಸಂಖ್ಯೆ:02

ಪೆಬ್ರವರಿ - ಮಾರ್ಚ್ ಏಪ್ರೀಲ್ 2010ನೇ ಮಾಹೆಯಾನ ಜಮಾ ಖರ್ಚು ಓದಿ ಒಪ್ಪುವ ವಿಚಾರ.

ತೀರ್ಮಾನ:

ಓದಿ ಒಪ್ಪಲಾಯಿತು.

ವಿಷಯ ಸಂಖ್ಯೆ:03

ಈ ಕಛೇರಿಯ ಟೆಂಡರ್ ಪ್ರಕಟಣೆಗೆ ವಿವಅನಿ:ಕ್ರಸಂ.06/2010-11, ದಿನಾಂಕ:16-02-2010ರಂತೆ ಸೊರಬ ಪಟ್ಟಣ ಪಂಚಾಯಿತಿಗೆ 2010-11ನೇ ಸಾಲಿಗೆ ಘನತ್ಯಾಜ್ಯ ವಸ್ತು ವಿಲೇವಾರಿಗೆ ಸಂಬಂಧಪಟ್ಟಂತೆ ಪೌರಕಾರ್ಮಿಕರನ್ನು ಒದಗಿಸುವ ಬಗ್ಗೆ ಕರೆಯಲಾದ ಟೆಂಡರನ್ನು ದಿನಾಂಕ:09-04-2010 ರಂದು ಬೆಳಿಗ್ಗೆ 11.30 ಗಂಟೆಗೆ ಸದಸ್ಯರು ಹಾಗೂ ಗುತ್ತಿಗೆದಾರರ ಸಮಕ್ಷಮ ಟೆಂಡರ್ ತೆರೆಯಲಾಗಿದ್ದು, ಸದರಿ ಟೆಂಡರ್‌ಗೆ ಒಟ್ಟು (3)ಮೂರು ಜನ ಗುತ್ತಿಗೆದಾರರು ದರಪಟ್ಟಿಯನ್ನು ಸಲ್ಲಿಸಿದ್ದು, ಈ ಪೈಕಿ ಗುತ್ತಿಗೆದಾರರಾದ ಶ್ರೀ.ಜಾಫರ್ ಅಲಿಖಾನ್, ನೆಹರು ನಗರ , ಸಾಗರ ಇವರು ಸಲ್ಲಿಸಿದ ದರ ಇತರೆಯವರಿಗಿಂತ ಅತೀ ಕಡಿಮೆದವರಾಗಿದ್ದು, ದರಪಟ್ಟಿಯ ವಿವರ ಈ ಕೆಳಕಂಡಂತೆ ಇದ್ದು, ಸದರಿ ಗುತ್ತಿಗೆದಾರರ ದರವನ್ನು ಅಂಗೀಕರಿಸಿ ಮಾನ್ಯ ಜಿಲ್ಲಾಧಿಕಾರಿಗಳವರಿಗೆ ಅನುಮೋದನೆಗೆ ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ ಚರ್ಚಿಸುವ ವಿಚಾರ.

| ಕ್ರ. ಸಂ | ವಿವರ | ದರಪಟ್ಟಿ ಸಲ್ಲಿಸಿರುವ ಸಂಸ್ಥೆಯ ಹೆಸರು ಮತ್ತು ದರವಾರು | | | ಅತೀ ಕಡಿಮೆ ದರ ನಮೂದಿಸಿದ ಸಂಸ್ಥೆಯವರ ಹೆಸರು ಮತ್ತು ದರವಾರು |
|---|---|---|---|---|---|
| | ಪಟ್ಟಣ ಪಂಚಾಯಿತಿ ಸೊರಬ 2010-11ನೇ ಸಾಲಿಗೆ ಬೀದಿಗಳನ್ನು ಮತ್ತು ಬೀದಿ ಹಾಸು ರಸ್ತೆಗಳನ್ನು ಗುಡಿಸುವುದಕ್ಕಾಗಿ, ಕಟ್ಟಡ ನಿರ್ಮಾಣದ ಭಗ್ನವಷೇಷ | ಜಾಫರ್ ಅಲಿಖಾನ್ | ಬಸವರಾಜ್, | ಸುರೇಶ್ | ಜಾಫರ್ |

| | | | | | |
|---|---|---|---|---|---|
| | ಸಂಗ್ರಹಿಸುವುದು ಮತ್ತು ವಿಲೇವಾರಿ ರಸ್ತೆ ಬದಿಯ ಮೋರಿ ಸ್ವಚ್ಛಗೊಳಿಸುವುದು , ರಸ್ತೆ ಗಿಡಗಂಟೆ ಗಳನ್ನು ಬುಡ ಸಮೇತ ತೆಗೆಯುವುದು ಮತ್ತು ವಿಲೇವಾರಿ ಮಾಡುವುದು. | ಗುತ್ತಿಗೆದಾರರು, ನೆಹರೂ ನಗರ, ಸಾಗರ (ರೂಗಳಲ್ಲಿ) | ಬಾಪುಜಿ ನಗರ, 2ನೇ ಕ್ರಾಸ್, ಶಿವಮೊಗ್ಗ (ರೂಗಳಲ್ಲಿ) | ಪ್ರೈವೇಟ್ ಎಂಪ್ಲಾಯ್‌ಮೆಂಟ್ ಬ್ಯೂರೋ, ಶಿವಮೊಗ್ಗ (ರೂಗಳಲ್ಲಿ) | ಅಲಿಖಾನ್ ಗುತ್ತಿಗೆದಾರರು, ನೆಹರೂ ನಗರ, ಸಾಗರ |
| 1. | ನೈರ್ಮಲ್ಯ ಕೆಲಸ ನಿರ್ವಹಣೆ ಮತ್ತು ತಾಜ್ಯ ವಸ್ತುಗಳನ್ನು ಸಂಗ್ರಹಿಸಿ ವಿಲೇ ಮಾಡುವ ಕೆಲಸಕ್ಕೆ ಒಬ್ಬ ಕಾರ್ಮಿಕರಿಗೆ ಪ್ರತಿ ದಿನಕ್ಕೆ ಎಲ್ಲಾ ತೆರಿಗೆ ಹಾಗೂ ಭವಿಷ್ಯ ನಿಧಿ ವಿಮೆ ಸೇರಿಸಿ | 138.00 | 155.00 | 157.00 | 138.00 |
| 2. | ಲೋಡರ್ಸ್:ಒಬ್ಬ ಕಾರ್ಮಿಕನಿಗೆ ಎಲ್ಲಾ ತೆರಿಗೆ ಹಾಗೂ ಭವಿಷ್ಯ ನಿಧಿ ಸೇರಿಸಿ | 150.00 | 165.00 | 157.00 | 150.00 |
| 3. | ಎ.ಬಿ.ಸಿ ಮಾದರಿಯಲ್ಲಿ ಬೀದಿ ಗುಡಿಸುವುದು. ಒಬ್ಬ ಕಾರ್ಮಿಕನಿಗೆ ಎಲ್ಲಾ ತೆರಿಗೆ ಹಾಗೂ ಭವಿಷ್ಯ ನಿಧಿ ಸೇರಿಸಿ | 145.00 | 145.00 | 157.00 | 145.00 |
| 4. | ಟ್ರ್ಯಾಕ್ಟರ್ ಡ್ರೈವರ್:ಪ್ರತಿ ದಿನ ಒಬ್ಬ ಕಾರ್ಮಿಕನಿಗೆ ಎಲ್ಲಾ ತೆರಿಗೆ ಹಾಗೂ ಭವಿಷ್ಯ ನಿಧಿ ಸೇರಿಸಿ | 140.00 | 170.00 | 206.00 | 140.00 |

ತೀರ್ಮಾನ:

ವಿಷಯದ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ತುಲನಾತ್ಮಕ ಪಟ್ಟಿ ವಿವರಸಿರುವಂತೆ ಇತರೆ ಗುತ್ತಿಗೆದಾರರಿಗಿಂತ ಅತಿ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಾದ ಶ್ರೀ.ಜಾಫರ್ ಅಲಿಖಾನ್ ನೆಹರು ನಗರ ಸಾಗರರವರು ಸಲ್ಲಿಸಿರುವ ದರವನ್ನು ಅಂಗೀರಿಸಿ ಟೆಂಡರ್ ಅನುಮೋದನೆಗೆ ಮಾನ್ಯ ಜಿಲ್ಲಾಧಿಕಾರಿಗಳವರಿಗೆ ಪ್ರಸ್ತಾವನೆ ಸಲ್ಲಿಸಲು ಸರ್ವಾನುಮತದಿಂದ ಒಪ್ಪಲಾಯಿತು.

<u>ವಿಷಯ ಸಂಖ್ಯೆ:04</u>

ಈ ಕಛೇರಿಯ ನೈರ್ಮಲೀಕರಣ ವಿಲೇವಾರಿಗೆ ಸಂಬಂಧಪಟ್ಟಂತೆ ಟ್ಯಾಕ್ಟರ್ ನಂ.ಕೆಎ 15 - 1484 ಕಸ ವಿಲೇವಾರಿಗೆ ಸಂಬಂಧಪಟ್ಟಂತೆ ಟ್ರ್ಯಾಕ್ಟರ್‌ಗೆ ಕಸ ಕಡ್ಡಿಗಳು ಗಾಳಿಗೆ ಹಾರಿ ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಆಗದಂತೆ ಜಾಲರಿ ಅಳವಡಿಸಿದ್ದು, ಕಾರಣ ಸದರಿ ಟ್ರ್ಯಾಕ್ಟರ್‌ಗಳಿಗೆ ಬಾಡಿ ಕಟ್ಟಿಸಿರುವ ಬಾಬ್ತು ರೂ.50,785.00ಗಳನ್ನು ಕೃಪಾ ಟ್ರೇಡರ್ಸ್, ಸೊರಬರವರಿಗೆ ಪಾವತಿಸುವ ಬಗ್ಗೆ ಚರ್ಚಿಸುವ ವಿಚಾರ.

ತೀರ್ಮಾನ:

ವಿಷಯದ ಬಗ್ಗೆ ಚರ್ಚಿಸಿ ಟ್ಯಾಕ್ಟರ್‌ಗೆ ಬಾಡಿ ಕಟ್ಟಿಸಿರುವ ಬಿಲ್‌ಬಾಬ್ತು ರೂ.50,785.00ಗಳನ್ನು ಕೃಪಾ ಟ್ರೇಡರ್ಸ್ ಸೊರಬರವರಿಗೆ ಪಾವತಿಸಲು ಒಪ್ಪಲಾಯಿತು.

<u>ವಿಷಯ ಸಂಖ್ಯೆ:05</u>

ಈ ಪಟ್ಟಣ ಪಂಚಾಯಿತಿಯ ಘನತ್ಯಾಜ್ಯ ವಸ್ತು ನಿರ್ವಹಣೆಯ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರ ಆರೋಗ್ಯ ಹಿತದೃಷ್ಟಿಯಿಂದ ಸುರಕ್ಷಾದಾರಿ ವಸ್ತುಗಳಾದ ಗಮ್ ಷೂಸ್, ಹ್ಯಾಂಡ್ ಗ್ಲೋಸ್, ಮಾಸ್ಕ್‌ಗಳನ್ನು ತುರ್ತಾಗಿ ಖರೀದಿಸಿದ್ದು, ಈ ಬಿಲ್ ಬಾಬ್ತು ಬಿಲ್ ನಂ. 374 ದಿನಾಂಕ:22-05-2010ರಂತೆ ರೂ.15,277.00ಗಳನ್ನು ಮೇ::ಮೈಸೂರು ಕೆಮಿಕಲ್ಸ್ ಅಂಡ್ ಮಾರ್ಕೆಟಿಂಗ್ ಕಂ ಗುಣಿಗಲ್‌ರವರಿಗೆ ಪಾವತಿಸುವ ಬಗ್ಗೆ ಚರ್ಚಿಸುವ ವಿಚಾರ.

ತೀರ್ಮಾನ:

ವಿಷಯದ ಬಗ್ಗೆ ಚರ್ಚಿಸಿ ರೂ.15,277.00ಗಳನ್ನು ಮೇ::ಮೈಸೂರು ಕೆಮಿಕಲ್ಸ್ ಅಂಡ್ ಮಾರ್ಕೆಟಿಂಗ್ ಕುಂ ಗುಣಿಗಲ್‌ರವರಿಗೆ ಪಾವತಿಸಲು ಸರ್ವಾನುಮತದಿಂದ ಒಪ್ಪಲಾಯಿತು.

<u>ವಿಷಯ ಸಂಖ್ಯೆ:06</u>

ಈ ಕಛೇರಿಯ ಟೆಂಡರ್ ಪ್ರಕಟಣೆ ಜೆಇ:ಟೆಂಡರ್:ಸಿಆರ್.2/2010-11, ದಿನಾಂಕ:10-05-2010 ರಂತೆ ಸೊರಬ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 2007-08 & 2009-10 ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಹಾಗೂ ಐ.ಡಿ.ಎಸ್.ಎಂ.ಟಿ ಯೋಜನೆಯಡಿಯಲ್ಲಿ ನಿರ್ಮಿಸಲಾದ ವಾಣಿಜ್ಯ ಮಳಿಗೆ ಹಾಗೂ ಹಣ್ಣು ತರಕಾರಿ ಮಾರುಕಟ್ಟೆ ಮಳಿಗೆಗಳಿಗೆ ವಿದ್ಯುತ್ ಕಾಮಗಾರಿ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಿವಿಧ ಬಡಾವಣೆಯಲ್ಲಿ ಬೋರ್‌ವೆಲ್ ಕೊರಿಸಿ ಮೋಟಾರ್ ಮತ್ತು ಪಂಪ್ ಅಳವಡಿಸುವ ಕಾಮಗಾರಿಗಳಿಗೆ ಕರೆಯಲಾದ ಟೆಂಡರನ್ನು ದಿನಾಂಕ:29-05-2010 ರಂದು ಬೆಳಿಗ್ಗೆ 10.00ಗಂಟೆಗೆ ಅಧ್ಯಕ್ಷಾಧಿಕಾರಿಗಳು ಮತ್ತು ಸದಸ್ಯರು ಹಾಗೂ ಗುತ್ತಿಗೆದಾರರ ಸಮಕ್ಷಮ ಟೆಂಡರ್ ತೆರೆಯಲಾಗಿದ್ದು, ಸದರಿ ಟೆಂಡರ್‌ಗೆ ವಿವಿಧ ಗುತ್ತಿಗೆದಾರರು ದರಪಟ್ಟಿ ಸಲ್ಲಿಸಿದ್ದು, ಈ ಪೈಕಿ ಅತೀ ಕಡಿಮೆ ದರ ಸಲ್ಲಿಸಿರುವ ಗುತ್ತಿಗೆದಾರರ ದರವನ್ನು ಅಂಗೀಕರಿಸಿ ಮಾನ್ಯ ಜಿಲ್ಲಾಧಿಕಾರಿಗಳವರಿಗೆ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ ಚರ್ಚಿಸುವ ವಿಚಾರ.

ತೀರ್ಮಾನ:

ವಿಷಯದ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ಈ ಕೆಳಕಂಡಂತೆ ಇರುವ ತುಲನಾತ್ಮಕ ಪಟ್ಟಿಯಲ್ಲಿ ಸೊರಬ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಬೋರ್‌ವೆಲ್ ಕೊರೆಸಿರುವುದಕ್ಕೆ ಸಂಬಂದ ಪಟ್ಟ ಬಿಡಿಭಾಗಗಳನ್ನು ಅಳವಡಿಸಿರುವ ಕಾಮಗಾರಿ ಕ್ರಮ ಸಂಖ್ಯೆ 3,4,5,5/1,6,7 ಕ್ಕೆ ಮಾತ್ರ ಕಾಮಗಾರಿಯನ್ನು ನಿರ್ವಹಿಸಲು ಅನುಮೋದನೆ ನೀಡಲಾಯಿತು. ಉಳಿದಂತೆ ಕಾಮಗಾರಿಗಳ ಬಗ್ಗೆ ಚರ್ಚೆಯನ್ನು ಮುಂದೂಡಲಾಯಿತು.

<u>ವಿಷಯ ಸಂಖ್ಯೆ:07</u>

ಸೊರಬ ಪಟ್ಟಣ ಪಂಚಾಯಿತಿಯ ವ್ಯಾಪ್ತಿಯಲ್ಲಿ ಸೊರಬ ಶಿರಾಳಕೊಪ್ಪ ರಸ್ತೆ ಹಾಗೂ ಸೊರಬ-ಸಾಗರ ರಸ್ತೆ ಲೋಕೋಪಯೋಗಿ ಇಲಾಖೆಯಿಂದ ರಸ್ತೆ ಅಗಲೀಕರಣ ಕಾಮಗಾರಿ ನಡೆಯುತ್ತಿದ್ದು, ಸದರಿ ಕಾಮಗಾರಿಯು ನಡೆಯುವ ಸ್ಥಳದಲ್ಲಿ ರಸ್ತೆ ಪಕ್ಕದಲ್ಲಿ ಹಾಲಿ ಇರುವ ಪೈಪ್‌ಲೈನ್ ತೆಗೆಯಲಾಗಿದ್ದು, ಸಾರ್ವಜನಿಕರ ಕುಡಿಯುವ ನೀರಿನ ಹಿತದೃಷ್ಟಿಯಿಂದ ಹೊಸದಾಗಿ ಪೈಪ್‌ಲೈನ್ ಅಳವಡಿಸಲು ಸುಮಾರು 3.5ಕೀ ಮೀಟರ್ ಪೈಪ್‌ಲೈನ್ ಕಾಮಗಾರಿ ಅಂದಾಜು ರೂ.7.00ಲಕ್ಷ ತಗಲಬಹುದಾಗಿದ್ದು, ಈ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ:

ವಿಷಯದ ಬಗ್ಗೆ ಚರ್ಚಿಸಿ ಪೈಪ್‌ಲೈನ್ ಕಾಮಗಾರಿಯನ್ನು ನಿರ್ವಹಿಸಲು ಒಪ್ಪಲಾಯಿತು. ಹಾಗೂ ಪಟ್ಟಣ ಪಂಚಾಯಿತಿಯಲ್ಲಿ ಬರುವ ಎಲ್ಲಾ ವಾರ್ಡ್‌ಗಳಲ್ಲಿ ಅವಶ್ಯಕವಿರುವ ಕಡೆಗೂ ಸಹ ಪೈಪ್‌ಲೈನ್ ಅಳವಡಿಸಲು ಹಾಗೂ ಅದಕ್ಕೆ ತಗಲಬಹುದಾದ ವೆಚ್ಚವನ್ನು ಅಳವಡಿಸಲು ಹಾಗೂ ಅದಕ್ಕೆ ತಗಲಬಹುದಾದ ವೆಚ್ಚವನ್ನು ಪಟ್ಟಣ ಪಂಚಾಯಿತಿಯ ನಿಧಿಯಿಂದ ಬರೆಸಲು ಸರ್ವಾನುಮತದಿಂದ ಒಪ್ಪಲಾಯಿತು.

<u>ವಿಷಯ ಸಂಖ್ಯೆ:08</u>

2010-11ನೇ ಸಾಲಿಗೆ ಪಟ್ಟಣ ಪಂಚಾಯಿತಿಗೆ ಸೇರಿದ ಇತರೆ ಖಿಸ್ತುಗಳನ್ನು ಬಹಿರಂಗ ಹರಾಜು ಮಾಡಲಾಗಿದ್ದು, ಸದರಿ ಹರಾಜನ್ನು ಸ್ಥಿರೀಕರಿಸುವ ಬಗ್ಗೆ ಚರ್ಚಿಸುವ ವಿಚಾರ.

| | | | |
|---|---|---|---|
| 1 | ಸುಂತೆ ಸುಂಕ ವಸೂಲಿ | ಶ್ರೀ.ಲಿಂಗರಾಜ್ ಬಿನ್ ರಾಮಪ್ಪ | 2,05,000.00 |
| 2 | ಹಸೀ ಮೀನು ಮಾರ್ಕೆಟ್ ಸುಂಕ | ಶ್ರೀ.ಸುರೇಶ್ ಪಾಣಿ ಬಿನ್ | 47,000.00 |

| | | | |
|---|---|---|---|
| | | ಲಕ್ಷ್ಮಣಪ್ಪ | |
| 3. | ಮಾಂಸದ ಅಂಗಡಿ | ಎಸ್.ಪರಶುರಾಮಪ್ಪ ಬಿನ್ ಸಣ್ಣಬೈಲ್ ಸಿದ್ದಪ್ಪ | 92,500.00 |
| 4. | ಬಸ್‌ಸ್ಟ್ಯಾಂಡ್ ಸ್ಟ್ಯಾಂಡ್ ಫೀ | ಜೆ.ಬಿ.ಅಶೋಕ್‌ಕುಮಾರ್ | 32,000.00 |
| 5. | ಬಸ್‌ಸ್ಟ್ಯಾಂಡ್ ಹೋಟೆಲ್ | ಪಾಣಿ ಸುರೇಶ್ | 28,000.00 |
| 6. | ಬಸ್‌ಸ್ಟ್ಯಾಂಡ್ ಬೀಡಾ ಅಂಗಡಿ | ಮೃತ್ಯುಂಜಯ ಜೆ.ಆರ್ | 12,000.00 |
| 7. | ಹಳೇ ತಾಲ್ಲೂಕು ಕಛೇರಿ ಎದುರು ಮಳಿಗೆ | ಲಿಂಗಪ್ಪ | 13,000.00 |
| | | | 4,29,500.00 |

ತೀರ್ಮಾನ:

ವಿಷಯದ ಬಗ್ಗೆ ಚರ್ಚಿಸಿ 2010-11ನೇ ಸಾಲಿಗೆ ಪಟ್ಟಣ ಪಂಚಾಯಿತಿಗೆ ಸೇರಿದ ಇತರೆ ಖಿಸ್ತುಗಳನ್ನು ಬಹಿರಂಗ ಹರಾಜು ಮಾಡಲಾಗಿದ್ದನ್ನು ಸ್ಥಿರೀಕರಿಸುವ ಬಗ್ಗೆ ಸರ್ವಾನುಮತದಿಂದ ಒಪ್ಪಲಾಯಿತು.

ವಿಷಯ ಸಂಖ್ಯೆ:09

ಸೊರಬ ಪಟ್ಟಣ ಪಂಚಾಯಿತಿಯ ನಿರ್ಮಲ ನಗರ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಜಿ.ಐ.ಎಸ್ ಪದ್ದತಿಯಲ್ಲಿ ಆಸ್ತಿ ಸರ್ವೆ ಕಾರ್ಯ ಪೂರ್ಣಗೊಂಡಿದ್ದು, ಈಗ ರಸ್ತೆಗೆ ನಾಮಫಲಕ ಹಾಕುವ ಬಗ್ಗೆ ಚರ್ಚಿಸುವ ವಿಚಾರ.

ತೀರ್ಮಾನ:

ವಿಷಯದ ಬಗ್ಗೆ ಚರ್ಚಿಸಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ರಸ್ತೆಗಳಿಗೆ ನಾಮ ಫಲಕ ಹಾಕಲು ಒಪ್ಪಲಾಯಿತು. ಹಾಗೂ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಪಟ್ಟಣ ಪಂಚಾಯಿತಿಗೆ ಕಾಯ್ದಿರಿಸಿರುವ ಜಾಗವನ್ನು ಗುರುತಿಸಿ ತಂತಿ ಬೇಲಿ ಅಳವಡಿಸಲು ಸರ್ವಾನುಮತದಿಂದ ಒಪ್ಪಲಾಯಿತು.

ವಿಷಯ ಸಂಖ್ಯೆ:10/1ಅಧ್ಯಕ್ಷಾಧಿಕಾರಿಗಳವರ ಅನುಮತಿ ಮೇರೆಗೆ ತರಬಹುದಾದ ಇತರೆ ವಿಚಾರಗಳು

ನೀರು ಸರಬರಾಜು ವಿಭಾಗದಲ್ಲಿ ಗುತ್ತಿಗೆ ಆದಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಶ್ರೀ.ಬಂಗಾರಪ್ಪ ರವರು ಕೆಲಸದಿಂದ ತೆಗೆದು ಹಾಕುವ ಬಗ್ಗೆ ಹಾಗೂ ನೀರು ಸರಬರಾಜುಗೆ ಸಂಬಂದಪಟ್ಟಂತೆ ಕೆಲಸ ನಿರ್ವಹಿಸಲು ಗುತ್ತಿಗೆ ದಾರರಿಂದ ಟೆಂಡರ್ ಕರೆಯುವ ಬಗ್ಗೆ ಚರ್ಚಿಸುವ ವಿಚಾರ.

ತೀರ್ಮಾನ:

ವಿಷಯದ ಬಗ್ಗೆ ಚರ್ಚಿಸಿ ನೀರು ಸರಬರಾಜು ವಿಭಾಗದಲ್ಲಿ ಗುತ್ತಿಗೆ ಆದಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಶ್ರೀ. ಬಂಗಾರಪ್ಪರವರನ್ನು ಕೆಲಸದಿಂದ ತೆಗೆದು ಹಾಕಲು ಸರ್ವಾನುಮತದಿಂದ ಒಪ್ಪಲಾಯಿತು. ಹಾಗೂ ನೀರು ಸರಬರಾಜು ವ್ಯವಸ್ಥೆ ನಿರ್ವಹಣೆ ಮತ್ತು ನೀರು ಸರಬರಾಜುಗೆ ಸಂಬಂಧಪಟ್ಟಂತೆ ಟೆಂಡರ್ ಕರೆದು ಹೊರ ಗುತ್ತಿಗೆ ನೀಡಲು ಸರ್ವಾನುಮತದಿಂದ ಒಪ್ಪಲಾಯಿತು.

ವಿಷಯ ಸಂಖ್ಯೆ:10/2

ಸೊರಬ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಸಿ ಎಂ ಎಸ್ ಎಂ ಟಿ ಡಿ ಪಿ ಯೋಜನೆಯಡಿಯಲ್ಲಿ ಹೈಮಾಸ್ಟ್ ಬೀದಿ ದೀಪ ಅಳವಡಿಸಿದ್ದು, ಕೆಲವು ಕಡೆ ಅಳವಡಿಸಿರುವ ಬೀದಿ ದೀಪ ಹತ್ತುತ್ತಿಲ್ಲ ಸಾರ್ವಜನಿಕರಿಗೆ ಓಡಾಡಲು ತುಂಬಾ ತೊಂದರೆಯಾಗುತ್ತದೆ. ಶ್ರೀ.ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಬಾಗದಲ್ಲಿ ಬರುವ ಸೇಮಿ ಹೈಮಾಸ್ಟ್ ಬೀದಿ ದೀಪ ಹಾಳಾಗಿದ್ದು, ಸದರಿ ದೀಪವನ್ನು ರಿಪೇರಿ ಮಾಡಿಸುವ ಬಗ್ಗೆ ಸದಸ್ಯರು ಒತ್ತಾಯಿಸಿದರು. ಈ ಬಗ್ಗೆ ಚರ್ಚಿಸುವ ವಿಚಾರ.

ತೀರ್ಮಾನ:

ವಿಷಯದ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ಸಿ ಎಂ ಎಸ್ ಎಂ ಟಿ ಡಿ ಪಿ ಯೋಜನೆಯಡಿಯಲ್ಲಿ ಅಳವಡಿಸಿರುವ ಹೈಮಾಸ್ಟ್ ಬೀದಿ ದೀಪ ಹತ್ತುತ್ತಿಲ್ಲದ ಬಗ್ಗೆ ಮುಖ್ಯಾಧಿಕಾರಿಗಳು ಮಾತನಾಡಿ ಈಗಾಗಲೇ ಸದರಿ ಗುತ್ತಿಗೆದಾರರಿಗೆ ತಿಳುವಳಿಕೆ ನೀಡಲಾಗಿದ್ದು, ಇನ್ನುವರೆಗೆ ಬಂದಿರುವುದಿಲ್ಲ. ಈಗ ಕೊನೆಯದಾಗಿ ಒಂದು ನೋಟೀಸ್ ನೀಡಿ ಬಾರದೇ ಇದ್ದ ಸಂದರ್ಭದಲ್ಲಿ ಸದರಿಯವರ ಗುತ್ತಿಗೆದಾರರ ವಿರುದ್ಧ ಟೆಂಡರ್ ನಿಯಮಾವಳಿಯಂತೆ ಸೂಕ್ತ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳವರಿಗೆ ಶಿಫಾರಸ್ಸು ಮಾಡಲು ಹಾಗೂ ಅವರಿಗೆ ಕಛೇರಿಯಿಂದ ಕೊಡಬೇಕಾಗಿರುವ ಬದ್ರತಾ ಠೇವಣಿ ಹಣ ಹಾಗೂ ಮುಂಗಡ ಠೇವಣಿ ಹಣ ಮುಟ್ಟುಗೋಲು ಹಾಕಿಕೊಂಡು ಅದೇ ಹಣದಲ್ಲಿ ಸದರಿ ಹೈಮಾಸ್ಟ್ ದೀಪವನ್ನು ದುರಸ್ಥಿಪಡಿಸಲು ಒಪ್ಪಲಾಯಿತು. ಹಾಗೂ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಭಾಗದಲ್ಲಿ ಬರುವ ಸೆಮಿ ಹೈಮಾಸ್ಟ್ ಬೀದಿ ದೀಪ ಹಾಳಾಗಿರುವ ಬಗ್ಗೆ ಕಿರಿಯ ಅಭಿಯಂತರರು ಮಾತನಾಡಿ ಸದರಿ ಹೈಮಾಸ್ಟ್ ಬೀದಿ ದೀಪ ಜಿಲ್ಲಾ ಪಂಚಾಯಿತಿ ಕಾರ್ಯಾಲಯದಿಂದ ಅಳವಡಿಸಿದ್ದು, ಸದರಿ ಬೀದಿ ದೀಪವನ್ನು ಪಟ್ಟಣ ಪಂಚಾಯಿತಿಗೆ ಹಸ್ತಾಂತರಿಸಿರುವುದಿಲ್ಲ. ಕಾರಣದ ಸದರಿ ದೀಪವನ್ನು ದುರಸ್ಥಿಪಡಿಸುವ ಬಗ್ಗೆ ಜಿಲ್ಲಾ ಪಂಚಾಯಿತಿ ಕಾರ್ಯಾಪಾಲಕ ಅಭಿಯಂತರರವರಿಗೆ ಪತ್ರ ಬರೆಯಲು ಒಪ್ಪಲಾಯಿತು.

<u>ವಿಷಯ ಸಂಖ್ಯೆ:10/3</u>

ಸೊರಬ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಾರ್ಡ್‌ಗಳಲ್ಲಿ ಕಳಪೆ ಕಾಮಗಾರಿ ನಡೆದಿದ್ದು, ಈ ಬಗ್ಗೆ ಚರ್ಚಿಸುವ ವಿಚಾರ.

ತೀರ್ಮಾನ:

ವಿಷಯದ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಎಲ್ಲಾ ವಾರ್ಡ್‌ಗಳಲ್ಲಿ ಕಳಪೆ ಕಾಮಗಾರಿಯಾಗಿದ್ದರ ಬಗ್ಗೆ ಬಹುತೇಕ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಈ ಬಗ್ಗೆ ಅಧ್ಯಕ್ಷರು ಮಾತನಾಡಿ ಕಳಪೆ ಕಾಮಗಾರಿಯ ಬಗ್ಗೆ ಆಯಾ ವಾರ್ಡ್‌ನ ಸದಸ್ಯರನ್ನು ಒಳಗೊಂಡಂತೆ ಅಧ್ಯಕ್ಷರು, ಸದಸ್ಯರು , ಮುಖ್ಯಾಧಿಕಾರಿಗಳು ಹಾಗೂ ಕಿರಿಯ ಅಭಿಯಂತರರನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು. ಹಾಗೂ ಸದರಿ ಸಮಿತಿಯು ಕಾಮಗಾರಿಯನ್ನು ಪರಿಶೀಲಿಸಿ ವರದಿ ನೀಡಿದ ನಂತರ ಯಾವ ಕಳಪೆ ಕಾಮಗಾರಿಯನ್ನು ಮಾಡಿರುವ ಗುತ್ತಿಗೆದಾರರ ಮೇಲೆ ಟೆಂಡರ್ ನಿಯಮಾವಳಿಯಂತೆ ಕ್ರಮ ಕೈಗೊಂಡು ಮುಂದಿನ ಕ್ರಮಕ್ಕಾಗಿ ಮಾನ್ಯ ಜಿಲ್ಲಾಧಿಕಾರಿಳವರಿಗೆ ಶಿಪಾರಸ್ಸು ಮಾಡಲು ಸರ್ವಾನುಮತದಿಂದ ಒಪ್ಪಲಾಯಿತು.

<u>ವಿಷಯ ಸಂಖ್ಯೆ:10/4</u>

ಸೊರಬ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.2 ರಲ್ಲಿ ಮಲ್ಲಿಕಾರ್ಜುನ ಸ್ವಾಮಿ ಮನೆ ಪಕ್ಕದ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಅಂಗನವಾಡಿ ರಸ್ತೆವರೆಗೂ ಎರಡೂ ಕಡೆ ಚರಂಡಿ ಮತ್ತು ಜಲ್ಲಿ ಬಿಚಾವಣೆ ಕಾಮಗಾರಿ ಮತ್ತು 2ನೇ ವಾರ್ಡಿನಲ್ಲಿ 8ಕಡೆ ಆರ್.ಸಿ.ಸಿ ಡೆಕ್‌ಸ್ಲ್ಯಾಬ್ ಕಾಮಗಾರಿ.

ತೀರ್ಮಾನ:

ಓದಿ ಒಪ್ಪಲಾಯಿತು.

ಸಹಿ/-
ಅಧ್ಯಕ್ಷರು,
ಪಟ್ಟಣ ಪಂಚಾಯಿತಿ,ಸೊರಬ.

" ಯಥಾನಕಲು "
ಸಹಿ/-
ಮುಖ್ಯಾಧಿಕಾರಿ,
ಪಟ್ಟಣ ಪಂಚಾಯಿತಿ,ಸೊರಬ.

# ಪಟ್ಟಣ ಪಂಚಾಯಿತಿ ಕಾರ್ಯಾಲಯ,ಸೊರಬ

ನಂ.ಸೊಪಪಂ.ಸಭಾ.ಸಿಆರ್.01/2010-11 ದಿನಾಂಕ:07-06-2010

ದಿನಾಂಕ:14-06-2010 ರಂದು ಸೋಮವಾರ ಬೆಳಿಗ್ಗೆ 11.30ಗಂಟೆಗೆ ಪಟ್ಟಣ ಪಂಚಾಯಿತಿ ಕಾರ್ಯಾಲಯದಲ್ಲಿ ಪಟ್ಟಣ ಪಂಚಾಯಿತಿ ಅಧ್ಯಕ್ಷಾಧಿಕಾರಿಗಳಾದ ಶ್ರೀ.ಪ್ರಭಾಕರದೇಶಪಾಂಡೆ ರವರ ಅಧ್ಯಕ್ಷತೆಯಲ್ಲಿ ಕರೆಯಲಾದ ಪಟ್ಟಣ ಪಂಚಾಯಿತಿಯ ಸಾಮಾನ್ಯ ಸಭೆಯನ್ನು ದಿನಾಂಕ:17-06-2010ರಂದು ಗುರುವಾರ ಬೆಳಿಗ್ಗೆ 11.30ಗಂಟೆಗೆ ಮುಂದೂಡಲ್ಪಟ್ಟಿದ್ದು, ಸದರಿ ಸಬೆಯಲ್ಲಿ ತೆಗೆದುಕೊಂಡ ನಿರ್ಣಯಗಳ ನಡುವಳಿಕೆಗಳು.

ಸಭೆಗೆ ಹಾಜರಿದ್ದ ಸದಸ್ಯರ ಸಂಖ್ಯೆ:11
ಸಭೆಗೆ ಗೈರು ಹಾಜರಾದ ಸದಸ್ಯರ ಸಂಖ್ಯೆ:03
ಒಟ್ಟು ಸದಸ್ಯರುಗಳ ಸಂಖ್ಯೆ:14

ಸಭೆಗೆ ಹಾಜರಿದ್ದ ನಾಮ ನಿರ್ದೇಶನ ಸದಸ್ಯರುಗಳ ಸಂಖ್ಯೆ:02
ಸಭೆಗೆ ಗೈರು ಹಾಜರಾದ ನಾಮ ನಿರ್ದೇಶನ ಸದಸ್ಯರುಗಳ ಸಂಖ್ಯೆ:01
ಒಟ್ಟು ಸದಸ್ಯರುಗಳ ಸಂಖ್ಯೆ:03

ವಿಷಯ ಸಂಖ್ಯೆ:06

ಈ ಕಛೇರಿಯ ಟೆಂಡರ್ ಪ್ರಕಟಣೆ ಜೆಇ:ಟೆಂಡರ್:ಸಿಆರ್.2/2010-11, ದಿನಾಂಕ:10-05-2010 ರಂತೆ ಸೊರಬ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 2007-08 & 2009-10 ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಹಾಗೂ ಐ.ಡಿ.ಎಸ್.ಎಂ.ಟಿ ಯೋಜನೆಯಡಿಯಲ್ಲಿ ನಿರ್ಮಿಸಲಾದ ವಾಣಿಜ್ಯ ಮಳಿಗೆ ಹಾಗೂ ಹಣ್ಣು ತರಕಾರಿ ಮಾರುಕಟ್ಟೆ ಮಳಿಗೆಗಳಿಗೆ ವಿದ್ಯುತ್ ಕಾಮಗಾರಿ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಿವಿಧ ಬಡಾವಣೆಯಲ್ಲಿ ಬೋರ್‌ವೆಲ್ ಕೊರಿಸಿ ಮೋಟಾರ್ ಮತ್ತು ಪಂಪ್ ಅಳವಡಿಸುವ ಕಾಮಗಾರಿಗಳಿಗೆ ಕರೆಯಲಾದ ಟೆಂಡರನ್ನು ದಿನಾಂಕ:29-05-2010 ರಂದು ಬೆಳಿಗ್ಗೆ 10.00ಗಂಟೆಗೆ ಅಧ್ಯಕ್ಷಾಧಿಕಾರಿಗಳು ಮತ್ತು ಸದಸ್ಯರು ಹಾಗೂ ಗುತ್ತಿಗೆದಾರರ ಸಮಕ್ಷಮ ಟೆಂಡರ್ ತೆರೆಯಲಾಗಿದ್ದು, ಸದರಿ ಟೆಂಡರ್‌ಗೆ ವಿವಿಧ ಗುತ್ತಿಗೆದಾರರು ದರಪಟ್ಟಿ ಸಲ್ಲಿಸಿದ್ದು, ಈ ಪೈಕಿ ಅತೀ ಕಡಿಮೆ ದರ ಸಲ್ಲಿಸಿರುವ ಗುತ್ತಿಗೆದಾರರ ದರವನ್ನು ಅಂಗೀಕರಿಸಿ ಮಾನ್ಯ ಜಿಲ್ಲಾಧಿಕಾರಿಗಳವರಿಗೆ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ ಚರ್ಚಿಸುವ ವಿಚಾರ.

***ತೀರ್ಮಾನ:***

| ಕ್ರ. ಸಂ | ಕಾಮಗಾರಿಯ ವಿವರ | ಅಂದಾಜು ಮೊತ್ತ | ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರ ಹೆಸರು ಮತ್ತು ದರವಾರು | ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರ ಹೆಸರು ಮತ್ತು ದರವಾರು | ಅತೀ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರ ಹೆಸರು ಮತ್ತು ದರವಾರು | ಷರಾ |
|---|---|---|---|---|---|---|
| 1 | **ಅನುಬಂಧ-I 2009-10ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ**<br>ಹಿಂದೂ ಬಾಂಧವರ ರುದ್ರಭೂಮಿ ಅಭಿವೃದ್ಧಿ ಕಾಮಗಾರಿ ಸಂಪರ್ಕ ರಸ್ತೆ ಇತರೆ ಕಾಮಗಾರಿ | 8,50,000.00 | ಹೆಚ್.ಎಂ ಶಿವುಕುಮಾರಸ್ವಾಮಿ ಗುತ್ತಿಗೆದಾರರು ಸೊರಬ ರೂ. 9,17,656.00 | ಹೆಚ್.ಮಹಾದೇವಪ್ಪ ಗುತ್ತಿಗೆದಾರರು ಸೊರಬ ರೂ. 8,48,653.00 | ಹೆಚ್.ಮಹಾದೇವಪ್ಪ ಗುತ್ತಿಗೆದಾರರು ಸೊರಬ ರೂ. 8,48,653.00 | |
| 2 | ಕಾನಕೇರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಗೆ ಕಾಂಪೌಂಡ್ ಗೋಡೆ ನಿರ್ಮಾಣ ಕಾಮಗಾರಿ | 2,00,000.00 | ಜಾನ್‌ಮನ್‌ವೇಲ್ ಗುತ್ತಿಗೆದಾರರು, ಸೊರಬ ರೂ.2,12,158.00 | ಹೆಚ್.ಮಹಾದೇವಪ್ಪ ಗುತ್ತಿಗೆದಾರರು ಸೊರಬ ರೂ. 2,04,057.48 | ಹೆಚ್.ಮಹಾದೇವಪ್ಪ ಗುತ್ತಿಗೆದಾರರು ಸೊರಬ ರೂ. 2,04,057.48 | |
| 3 | 3ನೇ ವಾರ್ಡಿನಲ್ಲಿ ಒಂದು ಬೋರ್‌ವೆಲ್ ಕೊರೆಸಿ ಪೈಪ್ ಲೈನ್ ಅಳವಡಿಸುವುದು | 1,50,000.00 | ವಿನ್ನರ್‌ರಿಗ್ ಸರ್ವಿಸ್ ಶಿರಾಳಕೊಪ್ಪ ರೂ. 164091.00 | ವೀನಸ್ ರಿಗ್ ಸರ್ವೀಸ್ , ಶಿರಾಳಕೊಪ್ಪ 165907.00 | ವಿನ್ನರ್‌ರಿಗ್ ಸರ್ವಿಸ್ ಶಿರಾಳಕೊಪ್ಪ ರೂ. 164091.00 | |
| 4 | **ಅನುಬಂಧ-II ಪಟ್ಟಣ ಪಂಚಾಯಿತಿ ಸಾಮಾನ್ಯ ನಿಧಿ**<br>ಸೊರಬ ಪಟ್ಟಣ ಪಂಚಾಯಿತಿಯಲ್ಲಿ ಬರುವ ಜಲಶುದ್ಧೀಕರಣ ಘಟಕದ ಹತ್ತಿರ ಬೊರೆವೆಲ್ ಕೊರೆಸಿ ಮೋಟಾರ್ ಪಂಪ್ ಅಳವಡಿಸುವ ಕಾಮಗಾರಿ | 1,64,000.00 | ವೀನಸ್ ರಿಗ್ ಸರ್ವೀಸ್ , ಶಿರಾಳಕೊಪ್ಪ 169907.00 | ವಿನ್ನರ್‌ರಿಗ್ ಸರ್ವಿಸ್ ಶಿರಾಳಕೊಪ್ಪ ರೂ. 168091.00 | ವಿನ್ನರ್‌ರಿಗ್ ಸರ್ವಿಸ್ ಶಿರಾಳಕೊಪ್ಪ ರೂ. 168091.00 | |
| 5 | ಸೊರಬ ಪಟ್ಟಣ ಪಂಚಾಯಿತಿಯಲ್ಲಿ ಬರುವ ಈಶ್ವರ ದೇವಸ್ಥಾನದ ಹತ್ತಿರ ಬೋರೆವೆಲ್ ಕೊರೆಸಿ ಮೋಟಾರ್‌ಪಂಪ್ ಅಳವಡಿಸುವ ಕಾಮಗಾರಿ | 1,64,000.00 | ವಿನ್ನರ್‌ರಿಗ್ ಸರ್ವಿಸ್ ಶಿರಾಳಕೊಪ್ಪ ರೂ. 168091.00 | ವೀನಸ್ ರಿಗ್ ಸರ್ವೀಸ್ , ಶಿರಾಳಕೊಪ್ಪ 169907.00 | ವಿನ್ನರ್‌ರಿಗ್ ಸರ್ವಿಸ್ ಶಿರಾಳಕೊಪ್ಪ ರೂ. 168091.00 | |

| | | | | | | |
|---|---|---|---|---|---|---|
| 5/1 | ಸೊರಬ ಪಟ್ಟಣ ಪಂಚಾಯಿತಿಯಲ್ಲಿ ಬರುವ ಕಸಿಮಾವಿನಕೊಪ್ಪಲು ಹತ್ತಿರ ಬೊರೆವೆಲ್ ಕೊರೆಸಿ ಮೋಟಾರ್‌ಪಂಪ್ ಅಳವಡಿಸುವ ಕಾಮಗಾರಿ | 1,64,000.00 | ವೀನಸ್ ರಿಗ್ ಸರ್ವೀಸ್ , ಶಿರಾಳಕೊಪ್ಪ 165907.00 | ವಿನ್ನರ್‌ರಿಗ್ ಸರ್ವಿಸ್ ಶಿರಾಳಕೊಪ್ಪ ರೂ. 164091.00 | ವಿನ್ನರ್‌ರಿಗ್ ಸರ್ವಿಸ್ ಶಿರಾಳಕೊಪ್ಪ ರೂ. 164091.00 | |
| 6 | ಸೊರಬ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಹಳೇ ಪೋಸ್ಟ್ ಆಫೀಸ್ ಎದುರು ಭಾಗ ಬೋರ್‌ವೆಲ್ ಕೊರೆಸಿ ಮೋಟಾರ್ ಪಂಪ್ ಅಳವಡಿಸುವ ಕಾಮಗಾರಿ | 1,64,000.00 | ವೀನಸ್ ರಿಗ್ ಸರ್ವೀಸ್ , ಶಿರಾಳಕೊಪ್ಪ 165907.00 | ವಿನ್ನರ್‌ರಿಗ್ ಸರ್ವಿಸ್ ಶಿರಾಳಕೊಪ್ಪ ರೂ. 164091.00 | ವಿನ್ನರ್‌ರಿಗ್ ಸರ್ವಿಸ್ ಶಿರಾಳಕೊಪ್ಪ ರೂ. 164091.00 | |
| 7 | ಸೊರಬ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಮರೂರು ರಸ್ತೆ ಗಣಪತಿ ದೇವಸ್ಥಾನದ ಹತ್ತಿರ ಬೊರೆವೆಲ್ ಕೊರೆಸಿ ಮೋಟಾರ್ ಪಂಪ್ ಅಳವಡಿಸುವ ಕಾಮಗಾರಿ | 1,64,000.00 | ವಿನ್ನರ್‌ರಿಗ್ ಸರ್ವಿಸ್ ಶಿರಾಳಕೊಪ್ಪ ರೂ. 164091.00 | ವೀನಸ್ ರಿಗ್ ಸರ್ವೀಸ್ , ಶಿರಾಳಕೊಪ್ಪ 165907.00 | ವಿನ್ನರ್‌ರಿಗ್ ಸರ್ವಿಸ್ ಶಿರಾಳಕೊಪ್ಪ ರೂ. 164091.00 | |
| 8 | ಸೊರಬ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಬಸ್ ಸ್ಟಾಂಡ್ ಹೋಟೆಲ್ ಹತ್ತಿರ ವಿರುವ ಬಸ್ಸ್ ಶೆಟ್ಟರನ್ನು ಖಾಸಗಿ ಬಸ್ ನಿಲ್ದಾಣಕ್ಕೆ ವರ್ಗಾಯಿಸುವ ಕಾಮಗಾರಿ | 65,000.00 | ಜಾನ್‌ಮನ್‌ವೇಲ್ ಗುತ್ತಿಗೆದಾರರು, ಸೊರಬ ಶೇ.8.00%ಹೆಚ್ಚಿಗೆ | ಹೆಚ್.ಎಂ ಶಿವುಕುಮಾರಸ್ವಾಮಿ ಗುತ್ತಿಗೆದಾರರು ಸೊರಬ ಶೇ.12% ಹೆಚ್ಚಿಗೆ | ಜಾನ್‌ಮನ್‌ವೇಲ್ ಗುತ್ತಿಗೆದಾರರು, ಸೊರಬ ಶೇ.8.00%ಹೆಚ್ಚಿಗೆ | |
| 9 | ಸೊರಬ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಾರ್ಡ್‌ಗಳಲ್ಲಿ ರಸ್ತೆಯ ಪಕ್ಕದಲ್ಲಿರುವ ಗಿಡಗಳನ್ನು ಕಡಿದು ಸ್ವಚ್ಚಗೊಳಿಸುವ ಕಾಮಗಾರಿ. | 1,65,000.00 | ಜಾನ್‌ಮನ್‌ವೇಲ್ ಗುತ್ತಿಗೆದಾರರು, ಸೊರಬ ರೂ.1,77,616.00 | ಹೆಚ್.ಎಂ ಶಿವುಕುಮಾರಸ್ವಾಮಿ ಗುತ್ತಿಗೆದಾರರು ಸೊರಬ ರೂ.1,91,650.00 | ಜಾನ್‌ಮನ್‌ವೇಲ್ ಗುತ್ತಿಗೆದಾರರು, ಸೊರಬ ರೂ.1,77,616.00 | |
| 10 | **ಅನುಬಂಧ-III ಐ.ಡಿ.ಎಸ್.ಎಂ.ಟಿ ಯೋಜನೆ** <br> ಸೊರಬ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಐ.ಡಿ.ಎಸ್.ಎಂ.ಟಿ ಯೋಜನೆಯಡಿಯಲ್ಲಿ ನಿರ್ಮಿಸುತ್ತಿರುವ ವಾಣಿಜ್ಯ ಮಳಿಗೆಗೆ ವಿದ್ಯೂತ್ ಸಂಪರ್ಕ ಕಲ್ಪಿಸುವ ಕಾಮಗಾರಿ | 5,30,000.00 | ಬಿ.ಎಸ್.ಪ್ರೇಮನಾಥ್ ಗುತ್ತಿಗೆದಾರರು ಶಕಲೇಶಪುರ ಹಾಸನ ರೂ.5,79,801.00 | ಎಂ.ಕೆ.ಅಣ್ಣೇಗೌಡ ಗುತ್ತಿಗೆದಾರರು ಅರಕಲಗೋಡು ಹಾಸನ ರೂ.6,30,470.00 | ಬಿ.ಎಸ್.ಪ್ರೇಮನಾಥ್ ಗುತ್ತಿಗೆದಾರರು ಶಕಲೇಶಪುರ ಹಾಸನ ರೂ.5,79,801.00 | |

| | | | | | | |
|---|---|---|---|---|---|---|
| 11 | **ಅನುಬಂಧ-IV ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆ**<br>ಸೊರಬ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಐ.ಡಿ.ಎಸ್. ಎಂ.ಟಿ ಯೋಜನೆ ಯಡಿಯಲ್ಲಿ ನಿರ್ಮಾಣವಾಗುತ್ತಿರುವ ವಾಣಿಜ್ಯ ಮಳಿಗೆಯ ಒಂದನೇ ಅಂತಸ್ಥಿನಲ್ಲಿ ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಮಳಿಗೆಗೆ ವಿದ್ಯೂತ್ ಸಂಪರ್ಕ ಕಲ್ಪಿಸುವ ಕಾಮಗಾರಿ | 5,30,000.00 | ಎಂ.ಕೆ.ಅಣ್ಣೇಗೌಡ<br>ಗುತ್ತಿಗೆದಾರರು<br>ಅರಕಲಗೋಡು<br>ಹಾಸನ<br>ರೂ.6,30,470.00 | ಬಿ.ಎಸ್.ಪ್ರೇಮನಾಥ್<br>ಗುತ್ತಿಗೆದಾರರು<br>ಶಕಲೇಶಪುರ<br>ಹಾಸನ<br>ರೂ.5,79,801.00 | ಬಿ.ಎಸ್.ಪ್ರೇಮನಾಥ್<br>ಗುತ್ತಿಗೆದಾರರು<br>ಶಕಲೇಶಪುರ<br>ಹಾಸನ<br>ರೂ.5,79,801.00 | |
| 12 | **ಅನುಬಂಧ-V: 2007-08ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ**<br>ಹಿಂದು ರುದ್ರಭೂಮಿಯಲ್ಲಿ ವಾಹನ ನಿಲುಗಡೆಗೆ ಶೆಲ್ಟರ್ ಹಾಗೂ ಪ್ಲಾಟ್‌ಫಾರಂ ನಿರ್ಮಾಣ ಕಾಮಗಾರಿ | 2,50,000.00 | ಜಾನ್‌ಮನ್‌ವೇಲ್<br>ಗುತ್ತಿಗೆದಾರರು,<br>ಸೊರಬ<br>ಶೇ.4.00ಹೆಚ್ಚಿಗೆ | ಹೆಚ್.ಮಹಾದೇವಪ್ಪ<br>ಗುತ್ತಿಗೆದಾರರು ಸೊರಬ<br>ರೂ.<br>ಎಸ್.ಆರ್ ದರದಂತೆ | ಹೆಚ್.ಮಹಾದೇವಪ್ಪ<br>ಗುತ್ತಿಗೆದಾರರು ಸೊರಬ<br>ರೂ.<br>ಎಸ್.ಆರ್ ದರದಂತೆ | |
| 13 | ಹಿಂದು ರುದ್ರಭೂಮಿಯ ಚಿತಗಾರಕ್ಕೆ ಶವ ಸುಡುವ ಒಲೆ ಅಳವಡಿಸುವ ಕಾಮಗಾರಿ | 50,000.00 | - | - | - | ಯಾವುದೇ ಟೆಂಡರ್ ಬಂದಿರುವುದಿಲ್ಲ. |

ವಿಷಯದ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ಈ ಕೆಳಕಂಡಂತೆ ಇರುವ ತುಲನಾತ್ಮಕ ಪಟ್ಟಿಯಲ್ಲಿ ಸೊರಬ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಬೋರ್‌ವೆಲ್ ಕೊರೆಸಿರುವುದಕ್ಕೆ ಸಂಬಂದ ಪಟ್ಟ ಬಿಡಿಭಾಗಗಳನ್ನು ಅಳವಡಿಸಿರುವ ಕಾಮಗಾರಿ ಕ್ರಮ ಸಂಖ್ಯೆ 3,4,5,5/1,6,7 ಕ್ಕೆ ಮಾತ್ರ ಕಾಮಗಾರಿಯನ್ನು ನಿರ್ವಹಿಸಲು ಅನುಮೋದನೆ ನೀಡಲಾಯಿತು. ಉಳಿದಂತೆ ಕಾಮಗಾರಿಗಳ ಬಗ್ಗೆ ಚರ್ಚೆಯನ್ನು ಮುಂದೂಡಲಾಯಿತು.

ಸಹಿ/-
ಅಧ್ಯಕ್ಷರು,
ಪಟ್ಟಣ ಪಂಚಾಯಿತಿ,ಸೊರಬ.

“ ಯಥಾನಕಲು ”
ಸಹಿ/-
ಮುಖ್ಯಾಧಿಕಾರಿ,
ಪಟ್ಟಣ ಪಂಚಾಯಿತಿ,ಸೊರಬ.